ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 60-64
©*IIMRD*, Mysuru

IIMRD JOURNALS

www.iimrd.com

# ಮ್ಯಾಸಬೇಡ ಬುಡಕಟ್ಟು ಸಮುದಾಯದಲ್ಲಿ ಹೈನು ಸಂಪ್ರದಾಯ: ಒಂದು ಸಾಂಸ್ಕೃತಿಕ ಅಧ್ಯಯನ

ಡಾ ನಾಗೇಶ ಎಂ.[1]

**ಪೀಠಿಕೆ**

ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಹೈನು ಎನ್ನಲಾಗುತ್ತದೆ. ತಲೆತಲಾಂತರದಿಂದ ಪಶುಪಾಲನೆಯನ್ನು ಮಾಡಿಕೊಂಡುಬಂದಿರುವ ಮ್ಯಾಸಬೇಡರು ಪಶುಪಾಲನೆಯನ್ನು ಒಂದು ಸಂಪ್ರಾಯ ಎಂಬ ರೀತಿಯಲ್ಲಿ ಪಾಲಿಸಿಕೊಂಡು ಬರುತ್ತಿದ್ದಾರೆ. ಇವರು ಪಶುಪಾಲನೆಯನ್ನು ಮುಂದುವರಿಸಿಕೊಂಡು ಬರಲು ದೇವರ ಹೆಸರಿನಲ್ಲಿ ದನಕರುಗಳನ್ನು ಸಾಕುವ ಪದ್ಧತಿಯನ್ನು ರೂಢಿಸಿಕೊಂಡಿದ್ದು, ಅವುಗಳ ಪಾಲನೆ ಮಾಡಲು ಕಿಲಾರಿ ಎಂಬುವವನನ್ನು ನೇಮಕ ಮಾಡಿಕೊಂಡಿರುತ್ತಾರೆ. ಪ್ರಸ್ತುತ ಈ ಲೇಖನದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯನ್ನು ಕ್ಷೇತ್ರ ವ್ಯಾಪ್ತಿಯಾಗಿಸಿಕೊಂಡು ಅಲ್ಲಿನ ಪಶುಪಾಲಕ ಸಮುದಾಯವಾದ ಮ್ಯಾಸಬೇಡ ಬುಡಕಟ್ಟಿನವರಲ್ಲಿನ ಹಾಲು ಮೊಸರಿನ ವಿಧಿ ನಿಷೇಧಗಳನ್ನು ವಿಷಯ ವ್ಯಾಪ್ತಿಯನ್ನಾಗಿಸಿಕೊಂಡು ಈ ಲೇಖನ ಸಿದ್ಧಪಡಿಸಲಾಗಿದೆ. ಪ್ರಸ್ತುತ ಹೈನುಗಾರಿಕೆಗೆ ಸಂಬಂಧಿಸಿದಂತೆ ಮ್ಯಾಸಬೇಡರಲ್ಲಿನ ನಂಬಿಕೆ, ನಿಷೇಧ ಸಂಪ್ರದಾಯಗಳ ಕುರಿತು ಚರ್ಚಿಸಲಿದ್ದೇನೆ. ಪಶುಪಾಲಕ ಮ್ಯಾಸಬೇಡರು ಹಾಲು, ಮೊಸರು, ಬೆಣ್ಣೆ, ತುಪ್ಪಗಳನ್ನು ಬಳಸುವಾಗ, ಮೊತ್ತೊಬ್ಬರಿಗೆ ನೀಡುವಾಗ ಅವುಗಳನ್ನು ಸಂಸ್ಕರಿಸುವಾಗ ಅನುಸರಿಸುವ ಕ್ರಮಗಳು ವಿಶಿಷ್ಟವಾದವುಗಳು, ಬೆಣ್ಣೆ ಕಾಯಿಸಿ ತುಪ್ಪಮಾಡುವ ವಿಧಾನ ಅದಕ್ಕೆ ಬಳಸುವ ಕಟ್ಟಿಗೆ, ಗಿಣ್ಣದ ಹಾಲನ್ನು ಬಳಸುವ ವಿಧಾನ, ಹೆಪ್ಪು(ತೋಡು/ಜೋಡು) ಹಾಕುವ ವಿಧಾನ, ಹಾಲನ್ನೂ, ಹಾಲು ಹಾಕಿದ ಟೀ ಕಾಫಿಯನ್ನೂ ಕೆಲವೊಂದು ಸಮುದಾಯಗಳಿಗೆ ನೀಡದಂತಿರುವ ನಿಷೇಧಗಳು, ಹಾಲು ಕರೆಯುವ ಹಸು, ಎಮ್ಮೆಗಳನ್ನು ವಿಶೇಷವಾಗಿ ಹಾರೈಕೆ ಮಾಡುವ ಕ್ರಮ ಮುಂತಾದುವುಗಳ ಬಗ್ಗೆ ವಿಮರ್ಶಿಸಲಾಗಿದೆ.

ತಲತಲಾಂತರದಿಂದ ಪಶುಪಾಲನೆಯನ್ನು ಮಾಡಿಕೊಂಡು ಬಂದಿರುವ ಈ ಸಮುದಾಯದವರು ತಮ್ಮ ಸಾಕು ಹಸು, ಎಮ್ಮೆಗಳೇನಾದರೂ ಗರ್ಭದರಿಸಿದರೆ ಅವುಗಳು ಕರು ಹಾಕುವವರೆಗೆ ತುಂಬಾ ಜೊಪಾನ ಮಾಡುತ್ತಾರೆ. ಹೆಚ್ಚು ಮಳೆ, ಬಿಸಿಲು ಬೀಳುವ ಸ್ಥಳದಲ್ಲಿ ಅವುಗಳನ್ನು ಕಟ್ಟದೆ ಸಾಟು (ಸುರಕ್ಷಿತ ಸ್ಥಳ) ಇರುವ ಸ್ಥಳದಲ್ಲಿ ಕಟ್ಟಿ ಜೋಪಾನ ಮಡುತ್ತಾರೆ ಅಲ್ಲದೆ ಅವುಗಳು ಗರ್ಭದರಿಸಿದಾಗ ದೃಷ್ಟಿತಾಗಿ ಅವುಗಳಿಗೆ ತೊಂದರೆ ಆಗಬಾರದು ಎಂದು ತೆಂಗಿನ ಚಿಪ್ಪು, ಮೋಟು ಕಸಬರಕೆಯನ್ನೂ ಹಗ್ಗದಲ್ಲಿ ಸೇರಿಸಿ ಅವುಗಳ ಕತ್ತಿಗೆ ಕಟ್ಟುತ್ತಾರೆ ಹೀಗೆ ಮಾಡುವುದರಿಂದ ದೃಷ್ಟಿ ತಾಗುವುದಿಲ್ಲ ಎಂದು ನಂಬುತ್ತಾರೆ. ಇದಲ್ಲದೆ ಗರ್ಭರಿಸಿದ ಎಮ್ಮೆ, ಹಸುವಿನ ಮೈ ಸುತ್ತಾ ಸುಣ್ಣ ಅಥವಾ ಜಾಜಿನಿಂದ ಪಟ್ಟಿ ಬಳಿಯುತ್ತಾರೆ ಇದೂ ಸಹ ದೃಷ್ಟಿ ಆಗದಿರಲಿ ಎಂದು ಮಾಡುತ್ತಾರೆ. ಒಂದು ವೇಳೆ ದೃಷ್ಟಿಯಾದರೆ ಹಾಲು ಕಡಿಮೆಯಾಗುತ್ತೆ ಎಂದು ಹೇಳುತ್ತಾರೆ. ಹಸು ಅಥವಾ ಎಮ್ಮೆ ಕರು ಹಾಕಿದ ತಕ್ಷಣ ಕರುವಿನ ಕಾಲ ಗೊರಸಿನ ಮುಂದಿನ

---

[1] *ಪೋಸ್ಟ್ ಡಾಕ್ಟೋರಲ್ ಫೆಲೋ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.*

ತುದಿಯನ್ನು ಉಗುರಿನಿಂದ ಚಿವುಟಿ ಹಾಕುತ್ತಾರೆ ನಂತರ ಕರುವನ್ನು ತಾಯಿಯ ಮುಂದೆ ಹಾಕುತ್ತಾರೆ. ಆಗ ಆ ತಾಯಿ ಹಸು ಅಥವಾ ಎಮ್ಮೆ ಆ ಕರುವನ್ನು ತನ್ನ ನಾಲಿಗೆಯಿಂದ ನೆಕ್ಕಿ ಸ್ವಚ್ಛಗೊಳಿಸುತ್ತದೆ. ನಂತರ ಮಡಿಹಾಲನ್ನು ಕರೆದು ಸಂಗ್ರಹಿಸಿ ನಂತರ ಕರುವಿಗೆ ಕುಡಿಯಲು ಬಿಡುತ್ತಾರೆ. ಕೆಲವು ದಿನಗಳ ನಂತರ ಒಂದು ವೇಳೆ ಅವುಗಳು ಹಾಲು ಕೊಡುವ ಪ್ರಮಾಣ ಕಡಿಮೆಯಾದರೆ ನೆನೆಸಿದ ಸಜ್ಜೆಯನ್ನು ಕುಟ್ಟಿ ಅದರ ನುಚ್ಚನ್ನು ಹಸು, ಎಮ್ಮೆಗಳಿಗೆ ತಿನ್ನಿಸುತ್ತಾರೆ ಹೀಗೆ ಮಾಡುವುದರಿಂದ ಹಾಲು ಹೆಚ್ಚುತ್ತದೆ.

**ಮಡಿಹಾಲು/ಗಿಣ್ಣದ ಹಾಲು ನಿಡುವುದು**

ಗಿಣ್ಣದ ಹಾಲು ಎಂದರೆ ಹಸು, ಎಮ್ಮೆ, ಕುರಿಗಳು ಕರು ಹಾಕಿದಾಗ ಮೊದಲ ಹಾಲನ್ನು ಕರೆಯುತ್ತಾರೆ ಆ ಹಾಲು ಸ್ವಲ್ಪ ಗಟ್ಟಿಯಾಗಿರುತ್ತದೆ ಇದನ್ನು ಮಡಿಹಾಲು/ಗಿಣ್ಣದ ಹಾಲು ಎನ್ನುತ್ತಾರೆ. ಕರು ಹಾಕಿ(ಈದ) ಮೂರು, ಐದು, ಏಳು, ಒಂಬತ್ತು ದಿನಗಳ ಕಾಲ ಅವುಗಳ ಹಾಲು ಸ್ವಲ್ಪ ಗಟ್ಟಿಯೇ ಇರುತ್ತದೆ. ಆ ಹಾಲು ಟೀ ಮಾಡಲು, ಮೊಸರು ಮಾಡಲು, ಕುಡಿಯಲು ಬರುವುದಿಲ್ಲ. ಆದರೆ ಆ ಹಾಲಿಗೆ ಬೇರೆ ಹಾಲನ್ನು ಬೆರೆಸಿ ಬೆಲ್ಲ ಹಾಕಿ ಕಾಯಿಸಿ ಗಿಣ್ಣ ಮಾಡಿಕೊಂಡು ತಿನ್ನುತ್ತಾರೆ. ಸಿಹಿಯಾಗಿ ರುಚಿಯಾಗಿರುವ ಈ ಗಿಣ್ಣವನ್ನು ಇವರು ತುಂಬಾ ಇಷ್ಟಪಟ್ಟು ತಿನ್ನುತ್ತಾರೆ. ಗಿಣ್ಣದ ಹಾಲು ಸುಮಾರು ಆರು ಏಳು ದಿನಗಳ ಕಾಲ ಕರೆಯುತ್ತವೆ. ಅಂತಹ ಸಮುಯದಲ್ಲಿ ಆ ಹಾಲು ಗಿಣ್ಣ ಮಾಡುವುದಕ್ಕೆ ಮಾತ್ರ ಬಳಕೆಯಾಗುತ್ತದೆ ಬೇರೆ ಯಾವುದಕ್ಕೂ ಬಳಕೆಯಾಗುವುದಿಲ್ಲ ಇಂತಹ ಸಮಯದಲ್ಲಿ ಮನೆಯವರು ಪ್ರತಿದಿನ ತಾವೇ ಆ ಹಾಲನ್ನು ಬಳಸದೆ ತಮ್ಮ ಸಂಬಂಧಿಕರಿಗೆ, (ಕೆಲವರು ಮೊದಲ ಮಡಿ ಹಾಲನ್ನು ಐನೇರಿಗೆ, ಬ್ರಾಹ್ಮಣರಿಗೆ ಕೊಡುತ್ತಾರೆ) ಅಕ್ಕ ಪಕ್ಕದ ಮನೆಯವರಿಗೆ ಲೋಟದಲ್ಲಿ ಅಥವಾ ಬಟ್ಟಲಲ್ಲಿ ಹಾಕಿ ಕೊಡುತ್ತಾರೆ. ಹೀಗೆ ನೀಡಿದ ಗಿಣ್ಣದ ಹಾಲನ್ನು ಪಡೆದವರು ಆ ಲೋಟ ಅಥವಾ ಬಟ್ಟಲಲ್ಲಿ ಸ್ವಲ್ಪ ಹಿಟ್ಟನ್ನು ಹಾಕಿ ಹಿಂದಿರುಗಿಸುವ ಸಂಪ್ರದಾಯವಿದೆ. ಬಹುಶಃ ಕರು ಹಾಕಿದ ಹಸು, ಎಮ್ಮೆಗೆ ಉತ್ತಮ ಪೌಷ್ಠಿಕ ಆಹಾರ ನೀಡುವ ಉದ್ದೇಶದಿಂದ ಆ ಲೋಟ. ಬಟ್ಟಲಲ್ಲಿ ಹಿಟ್ಟನ್ನು ಹಾಕಿ ಕಳುಹಿಸುತ್ತಾರೆ. ಹೀಗೆ ಸಂಗ್ರಹವಾದ ಹಿಟ್ಟನ್ನು ಆ ಹಸು, ಎಮ್ಮೆಗೆ ತಿನ್ನಿಸುತ್ತಾರೆ. ಮತ್ತೊಂದು ವಿಶೇಷವೆಂದರೆ ಮೊದಲ ದಿನ ಕರೆದ ಮಡಿಹಾಲಿನಲ್ಲಿ ಒಂದು ತುಂಡು ಬೆಲ್ಲ ಹಾಕಿ ಎಷ್ಟು ದಿನ ಬೇಕಾದರೂ ಸಂಗ್ರಹಿಸಿ ಇಟ್ಟು ಕೊಳ್ಳಬಹುದು. ಹೀಗೆ ಸಂಗ್ರಸಿಟ್ಟುಕೊಂಡ ಮಡಿಹಾಲನ್ನು ತಮಗೆ ಬೇಕಾದಾಗ ಸ್ವಲ್ಪ ತೆಗೆದುಕೊಂಡು ಅದಕ್ಕೆ ತಮಗೆ ಎಷ್ಟು ಬೇಕೋ ಅಷ್ಟು ಬೇರೆ ಹಾಲನ್ನು ಬೆರೆಸಿಕೊಂಡು ಗಿಣ್ಣ ಮಾಡಿಕೊಂಡು ತಿನ್ನುತ್ತಾರೆ.

**ಹೆಪ್ಪು ಕೇಳುವುದು (ತೋಡು)**

ದನಕರುಗಳು ಇರುವ ಮನೆಯಲ್ಲಿ ಹೆಚ್ಚು ಹಾಲು ಉತ್ಪಾದನೆಯಾದರೆ ಆ ಹಾಲನ್ನು ಕಾಯಿಸಿ ಮೊಸರು ಮಾಡುವ ಪದ್ಧತಿ ಇದೆ. ಹಾಲು ಕಾಯಿಸಿ ಕಾದು ಹಾರಿದ ಹಾಲಿನಲ್ಲಿ ಸ್ವಲ್ಪ ಮೊಸರು ಅಥವಾ ಮಜ್ಜಿಗೆ ಬೆರೆಸಿ ಮೊಸರು ಮಾಡುವ ಪದ್ಧತಿಗೆ ಹೆಪ್ಪು ಹಾಕುವುದು ಎನ್ನುವರು. ಕೆಲವೊಂದು ಸಂದರ್ಭದಲ್ಲಿ ಮನೆಯಲ್ಲಿ ಮೊಸರು ಅಥವಾ ಮಜ್ಜಿಗೆ ಸಂಪೂರ್ಣ ಖಾಲಿ ಆಗಿದ್ದಾಗ ಆ ದಿನ ಹಾಲು ಕಾಸಿ ಹೆಪ್ಪು ಹಾಕುವ ಸಂದರ್ಭದಲ್ಲಿ ಸ್ವಲ್ಪ ಮಜ್ಜಿಗೆ ಅಥವಾ ಮೊಸರು ಬೇಕಾಗಿರುತ್ತದೆ ಆಗ ಪಕ್ಕದ ಮನೆಯವರಿಂದ ಅದನ್ನು ಪಡೆಯುತ್ತಾರೆ. ಹೀಗೆ ಪಕ್ಕದ ಮನೆಯವರಿಂದ ಹೆಪ್ಪಿಗೆ ಮೊಸರು ಅಥವಾ ಮಜ್ಜಿಗೆ ಜೊತೆ ಪಡೆಯುವುದನ್ನು ಹೆಪ್ಪು ಕೇಳುವುದು (ತೆಲುಗಿನಲ್ಲಿ ತೋಡು) ಪಡೆಯುವುದು ಎನ್ನುತ್ತಾರೆ ಹೆಪ್ಪು ಪಡೆಯುವ ವಿಧಾನದಲ್ಲೂ ಕೆಲವು ನಿಯಮಗಳಿವೆ. ಹೆಪ್ಪು ಕೇಳುವವರು ಮೊಸರು ಕೊಡಿ, ಮಜ್ಜಿಗೆ

ಕೊಡಿ ಎಂದು ನೇರವಾಗಿ ಕೇಳುವಂತಿಲ್ಲ ಹೆಪ್ಪುಕೊಡಿ, ಜೋಡು ಕೊಡಿ(ತೆಲುಗಿನಲ್ಲಿ ತೋಡು ಕಾವಾಲಿ) ಅಂತ ಕೇಳುತ್ತಾರೆ. ಆಗ ಅವರು ಸ್ವಲ್ಪಮಾತ್ರ ಮೊಸರು ಅಥವಾ ಮಜ್ಜಿಗೆ ನೀಡುತ್ತಾರೆ ಇದನ್ನು ಕಾದ ಹಾಲಿನಲ್ಲಿ ಬೆರೆಸಿ ಮೊಸರು ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಪಶುಪಾಲಕ ಮನೆಗಳಲ್ಲಿ ಯಾವತ್ತೂ ಹೆಪ್ಪು ಕಳೆದುಕೊಳ್ಳಬಾರದು ಎಂಬ ನಿಯಮವಿದೆ. ಅಂದರೆ ನಿರಂತರವಾಗಿ ಮನೆಯಲ್ಲಿ ಹಾಲು ಮೊಸರು, ಬೆಣ್ಣೆ, ತುಪ್ಪ ಸಮೃದ್ಧವಾಗಿರಬೇಕು ಎಂಬ ಬಾವನೆ ಈ ಮಾತಿನದ್ದು.



**ಹಾಲು ಕಾಯಿಸಿರುವುದು**

**ತುಪ್ಪ ಕಾಯಿಸುವುದು**

ಮ್ಯಾಸಬೇಡರಲ್ಲಿ ದನಕರು ಹೆಚ್ಚಾಗಿರುವವರು ಮೊಸರು ಮಾಡಿ ಮಜ್ಜಿಗೆ ಕಡೆದು ಬೆಣ್ಣೆ ತೆಗೆದು ಬೆಣ್ಣೆಯನ್ನು ಕಾಯಿಸಿ ತುಪ್ಪ ಮಾಡುತ್ತಾರೆ. ತುಪ್ಪವನ್ನು ಕಾಯಿಸುವಾಗ ಕೆಲವು ಕ್ರಮಗಳನ್ನು ಅನುಸರಿಸುತ್ತಾರೆ. ತುಪ್ಪ ಕಾಯಿಸುವ ಪಾತ್ರೆಯೇ ಪ್ರತ್ಯೇಕವಾಗಿರುತ್ತದೆ. ಅದರಲ್ಲಿ ಬೇರೆ ಅಡುಗೆ ಮಾಡುವುದಿಲ್ಲ ಹಾಲನ್ನು ಮಾತ್ರ ಕಾಯಿಸಬಹುದು. ಸಾರು, ಪಲ್ಯಗಳಂತಹ ಕಾರದ ಅಡುಗೆ ಆ ಪಾತ್ರೆಯಲ್ಲಿ ಮಾಡುವುದಿಲ್ಲ, ಹೀಗೆ ಮಾಡಿದರೆ ಅಂಥಹ ಪಾತ್ರೆಯಲ್ಲಿ ತುಪ್ಪ ಕಾಯಿಸಿದರೆ ತುಪ್ಪ ಕೆಡುತ್ತದೆ ಅಥವಾ ಕಾರವಾಗುತ್ತದೆ ಆದ ಕಾರಣ ತುಪ್ಪ ಕಾಯಿಸಲು ಚಿಕ್ಕದೊಂದು ಪಾತ್ರೆ ಪ್ರತ್ಯೇಕವಾಗಿಟ್ಟಿರುತ್ತಾರೆ. ತುಪ್ಪವನ್ನು ಕಾಯಿಸಲು ತಂಗಟಿ ಕಟ್ಟಿಗೆಯನ್ನೇ ಬಳಸುತ್ತಾರೆ ಬೇರೆ ಯಾವ ಕಟ್ಟಿಗೆಯಿಂದಲೂ ತುಪ್ಪವನ್ನು ಕಾಯಿಸುವುದಿಲ್ಲ. ಬೇರೆ ಕಟ್ಟಿಗೆಯಿಂದ ತುಪ್ಪ ಕಾಯಿಸಿದರೆ ತುಪ್ಪ ಕೆಡುವುದೂ ಇಲ್ಲವೆ ಬೇರೆ ವಾಸನೆ ಬರುವುದೂ ಆಗುವುದುಂಟು ಹಾಗಾಗಿ ತುಪ್ಪ ಕಾಯಿಸಲು ತಂಗಟಿ ಕಟ್ಟಿಗೆಯನ್ನು ಮಾತ್ರ ಬಳಸುತ್ತಾರೆ. ಬೆಣ್ಣೆಯನ್ನು ಈ ಪ್ರತ್ಯೇಕ ಪಾತ್ರೆಯಲ್ಲಿ ಹಾಕಿ, ತಂಗಟಿ ಕಟ್ಟಿಗೆಯಿಂದ ಕಾಯಿಸುತ್ತಾರೆ ಸ್ವಲ್ಪ ಕಾದ ನಂತರ ಅದರಲ್ಲಿ ಎರಡು ವೀಳ್ಯೆದೆಲೆ, ಒಂದೆರಡು ಒಣಮೆಣಸಿನ ಕಾಯಿ ಹಾಕುತ್ತಾರೆ ಆಗ ತುಪ್ಪ ಒಳ್ಳೆಯ ಬಣ್ಣ

ಮತ್ತು ಪರಿಮಳ ಬರುತ್ತದೆ ಅಲ್ಲದೆ ಎಷ್ಟೇದಿನ ಇಟ್ಟರೂ ಕೆಡುವುದಿಲ್ಲ. ಈ ಎಲ್ಲಾ ಕ್ರಮಗಳನ್ನು ಅನುಸರಿಸಿ ಮ್ಯಾಸಬೇಡರ ಹೆಣ್ಣುಮಕ್ಕಳು ತುಪ್ಪವನ್ನು ಕಾಯಿಸುತ್ತಾರೆ.

**ಹಾಲು ಮೊಸರು ಮಾರುವುದು ನಿಷೇಧ**

ಸಾಮಾನ್ಯವಾಗಿ ಹಳೇಕಾಲದ ಜನ ಮನೆಯಲ್ಲಿ ಎಷ್ಟೇ ಹೈನು ಉತ್ಪಾದನೆ ಆಗುತ್ತಿದ್ದರೂ ಮಾರಲು ಇಷ್ಟಪಡುವುದಿಲ್ಲ. ಹಾಗೆ ಹಾಲು ಮೊಸರು ಮಾರಿಕೊಂಡರೆ ಪಶುಮಂದೆ ಹೆಚ್ಚುವುದಿಲ್ಲ ಎಂಬ ನಂಬಿಕೆ ಇವರದು. ಹಾಲನ್ನು ಕಾಯಿಸಿ ಮಜ್ಜಿಗೆ ಮಾಡಿ ಬೆಣ್ಣೆ ತೆಗೆದುಕೊಂಡು ಮಜ್ಜಿಗೆಯನ್ನು ಜನರಿಗೆ ಹಂಚುವ ಪದ್ಧತಿ ಇವರಲ್ಲಿದೆ. ಹಾಲನ್ನು ಸಹ ಮಾರದೇ ಉಚಿತವಾಗಿ ಕೊಡುತ್ತಿದ್ದರು ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಉತ್ಪಾದನೆಯಾಗುವ ಹಾಲನ್ನು ಡೈರಿಗೆ ಹಾಕುತ್ತಿದ್ದಾರೆ. ಆದರೆ ದೇವರ ಹೆಸರಲ್ಲಿ ಬಿಟ್ಟ ಹಸು, ಕುರಿಗಳ ಹಾಲನ್ನು ಮಾತ್ರ ಎಂದಿಗೂ ಮಾರುವುದಿಲ್ಲ. ದೇವರ ಎತ್ತುಗಳ ಗೂಡಿನಲ್ಲಿರುವ ಹಸುಗಳು ಕರು ಹಾಕಿದಾಗ ಅವುಗಳ ಹಾಲನ್ನು ಅಲ್ಲಿಯ ಕಿಲಾರಿ ತನಗೆ ಎಷ್ಟು ಬೇಕು ಅಷ್ಟನ್ನು ಮಾತ್ರ ಕರೆದು ಬಳಸಿಕೊಳ್ಳುತ್ತಾನೆ. ಒಂದು ವೇಳೆ ಗೂಡಿಗೆ ಭಕ್ತಾದಿಗಳು ಬಂದಾಗ ಅವರಿಗೆ ಊಟಕ್ಕೆ ಆ ಹಾಲು ಮೊಸರನ್ನು ಬಳಸಬಹುದು ಆದರೆ ಯಾವುದೇ ಕಾರಣಕ್ಕೂ ಮಾರುವಂತಿಲ್ಲ. ಎಷ್ಟೇ ಹಸುಗಳು ಕರೆಯುತ್ತಿದ್ದರೂ ಕಿಲಾರಿಗಳು ತಮಗೆ ಅಗತ್ಯವಿದ್ದಷ್ಟು ಮಾತ್ರ ಕರೆದುಕೊಂಡು ಉಳಿದವನ್ನು ಕರುಗಳಿಗೆ ಕುಡಿಯಲು ಬಿಡುತ್ತಾರೆ. ಮ್ಯಾಸಬೇಡರ ಪಶುಪಾಲನಾ ವ್ಯವಸ್ತೆಯನ್ನು ಹಿಂದಿನಿಂದ ಇಂದಿನ ವೆರೆಗೂ ನೋಡಿದರೆ ಇವರು ಹೈನು ಉತ್ಪಾದನೆ ಮತ್ತು ಅವುಗಳ ಮಾರಟಕ್ಕಾಗಿ ಪಶುಪಾಲನೆ ಮಾಡಿದಂತೆ ಕಂಡುಬರುವುದಿಲ್ಲ ಕೇಲವ ಪಶು ಸಂಪತ್ತು ಹೆಚ್ಚಳ ಮಾಡುವ, ಪಶುಪಾಲನೆಯನ್ನು ಮುಂದುವರಿಸಿಕೊಂಡು ಹೋಗುವ ಉದ್ದೇಶಕ್ಕಾಗಿ ಇವರಲ್ಲಿ ಪಶುಪಾಲನೆ ಉಳಿದುಕೊಂಡು ಬಂದಿದೆ ಎಂದು ತಿಳಿದು ಬರುತ್ತದೆ.



**ಮೊಸರು ಕಡೆಯುತ್ತಿರುವುದು**

ಇಂತಹ ಹತ್ತು ಹಲವು ನಿಯಮಗಳನ್ನು ಹಾಲು, ಹಾಲಿನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಮ್ಯಾಸಬೇಡರು ಅನುಸರಿಸಿಕೊಂಡು ಬರುತ್ತಿದ್ದಾರೆ. ಇವರು ಹಿಂದಿನಿಂದ ಅನುಸರಿಸಿಕೊಂಡು ಬಂದಿರುವ ಕೆಲವೊಂದು ನಿಯಮಗಳಲ್ಲಿ ಬದಲಾವಣೆ/ಸಡಿಲಿಕೆ ಮಾಡಿಕೊಂಡಿದ್ದರೂ ಸಹ ಸಂಪೂರ್ಣ ಬದಲಾವಣೆ ಆಗಿಲ್ಲದಿರುವುದು ಕಂಡುಬರುತ್ತದೆ. ಈ ಹಿಂದೆ ಹಾಲನ್ನು ಮಾರಾಟ ಮಾಡುತ್ತಿದ್ದಿಲ್ಲ ಆದರೆ ಇತ್ತೀಚಿನ ದಿನಗಳಲ್ಲಿ ಕೆಲವೊಂದು ಮನೆಯವರು ಹಾಲನ್ನು ಡೈರಿಗಳಿಗೆ ಹಾಕುತ್ತಿದ್ದಾರೆ. ಆದರೆ ದೇವರ ರಾಸುಗಳ ವಿಚಾರದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳದೆ ಕಟ್ಟುನಿಟ್ಟಾಗಿ ಅನುಸರಿಸಿಕೊಂಡು ಬರುತ್ತಿದ್ದಾರೆ.

**ವಕ್ತೃಗಳ ವಿವರ**

- ಗೊಡ್ಲ ಕಿಲಾರಿ ಬೋರಯ್ಯ, ವಯಸ್ಸು 69, ಕಿಲಾರಿ, ಕಂಪಳದೇವರ ಹಟ್ಟಿ. ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.
- ಗೊಂಚಯ್ಯ, ವಯಸ್ಸು 70, ಮುತ್ತಿಗಾರ ಹಳ್ಳಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.
- ಮಲ್ಲಯ್ಯ, ವಯಸ್ಸು 80, ಕಿಲಾರಿ, ಮುತ್ತಿಗಾರ ಹಳ್ಳಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.
- ಪಾಲಮ್ಮ, ವಯಸ್ಸು 50, ಕಂಪಳದೇವರ ಹಟ್ಟಿ, ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ.

**ಪರಾಮರ್ಶನ ಗ್ರಂಥಗಳು**

- ಮೀರಾಸಾಬಿಹಳ್ಳಿ ಶಿವಣ್ಣ. (2001). ಕಣಜ, ಪಟೇಲ್ ಪಬ್ಲಿಕೇಷನ್ಸ್, ಬೆಂಗಳೂರು.
- ಮುತ್ತಯ್ಯ. ಎಸ್. ಎಂ. (2007). ಜಾನಪದ ಸಂಕಥನ, ಅಕ್ಷಯ ಪ್ರಕಾಶನ, ಚಿತ್ರದುರ್ಗ.
- ಮುತ್ತಯ್ಯ ಎಸ್. ಎಂ. (2008). ಕಿಲಾರಿ, ಸೃಷ್ಟಿ ಪಬ್ಲಿಕೇಷನ್, ಚಿತ್ರದುರ್ಗ.
- ಸಂದ್ಯಾರೆಡ್ಡಿ ಕೆ.ಆರ್. (2000). ಬಯಲು ಸೀಮೆಯಲ್ಲಿ ದನ ಸಾಕಾಣಿಕೆ. ಇಲ್ಲಿ ದೇವೇಂದ್ರ ಕುಮಾರ ಹಕಾರಿ(ಸಂ), ಗ್ರಾಮೀಣ ಪಶು ಸಾಕಾಣಿಕೆ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.